ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 292/2020

ಸಿ ಡಬ್ಲ್ಯೂ-10

ಪಿ ಡಬ್ಲ್ಯೂ-10

ದಿಃ 17-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಅಶೋಕ ನಾಯ್ಕು
ತಂದೆಯ ಹೆಸರುಃ ದೇಮು ನಾಯ್ಕು
ವಯಸ್ಸುಃ 62 ವರ್ಷ
ಉದ್ಯೋಗಃ ನಿವೃತ್ತ ಸಹಾಯ ಸಂಚಾರ ನಿರೀಕ್ಷಕರು,
ವಿಳಾಸಃ ಅಂಕೋಲಾ

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಸುಮಾರು 23 ವರ್ಷಗಳತನಕ ನಾನು ಕೆ ಎಸ್ ಆರ್ ಟಿ ಸಿ ಅಂಕೋಲಾ ಡಿಪ್ಪೋದಲ್ಲಿ ಸಹಾಯ ಸಂಚಾರ ನಿರೀಕ್ಷಕರು ಆಗಿ ಕೆಲಸ ಮಾಡಿರುತ್ತೇನೆ. ಆರೋಪಿಯ ಪರಿಚಯವಿರುತ್ತದೆ. ಚಾಸಾ-1 ರವರು ಪರಿಚಯವಿದೆ. ಅವರು ನಮ್ಮ ಘಟಕದ ಮ್ಯಾನೇಜರ್ ಆಗಿರುತ್ತಾರೆ. ಆರೋಪಿಯು ಕೆ ಎಸ್ ಆರ್ ಟಿ ಸಿ ಬಸ್ಸಿನ ಚಾಲಕನಾಗಿರುತ್ತಾರೆ. ಚಾಸಾ-6,7 ಮತ್ತು 9 ರವರು ಪರಿಚಯವಿರುತ್ತಾರೆ. ಆರೋಪಿ ಮತ್ತು ಚಾಸಾ-1 ಮತ್ತು 7 ರವರ ಮಧ್ಯ ಗಲಾಟೆಯಾಗಿರುವುದು ನಾನು ನೋಡಿರುವುದಿಲ್ಲ. ನೀವು ಅವರ ಮಧ್ಯ ಗಲಾಟೆಯಾಗಿದ್ದರ ಬಗ್ಗೆ ಪೊಲೀಸರು ಮುಂದೆ

ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಪೊಲೀಸರು ನನ್ನನ್ನು ಈ ಪ್ರಕರಣದ ವಿಷಯವಾಗಿ ವಿಚಾರಣೆ ಮಾಡಿರುವುದಿಲ್ಲ. ನನಗೆ ಈ ಪ್ರಕರಣದ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ಚಾಸಾ-1 ರವರಿಗೆ ಪೋನ್ ಮುಖಾಂತರ ಅವಾಚ್ಯ ಶಬ್ದಗಳಿಂದ ಬೈದಿದ್ದ ಕಾರಣ ಆರೋಪಿಯು ದ್ವೇಷದಿಂದ ಇದ್ದ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಗಲಾಟೆ ಮಾಡಿದ ವಿಚಾರವಾಗಿ ಆರೋಪಿಯ ಸಸ್ಪೆಂಡಿಗೆ ಚಾಸಾ-1 ಮತ್ತು 6 ಹಾಗೂ 7 ರವರು ಕಾರಣ ಎಂದರೆ ಸರಿಯಲ್ಲ. ದಿಃ12-08-2018 ರಂದು ಬೆಳಿಗ್ಗೆ 9.30 ಗಂಟೆಗೆ ಕೆ ಎಸ್ ಆರ್ ಟಿ ಸಿ ಡಿಪೋ ಘಟಕಕ್ಕೆ ಬಂದು ಆರೋಪಿಯು ಬಂದು ಚಾಸಾ-6 ಮತ್ತು 7 ರವರಿಗೆ ಬೋಳಿ ಮಗನೇ ಸೂಳೀ ಮಗನೆ ನಿನ್ನ ತಾಯಿನ ಹಡ ನನಗೆ ಸಸ್ಪೆಂಡ್ ಮಾಡುತ್ತೀಯಾ ನಿನಗೆ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಅಲ್ಲಿಯೇ ಇದ್ದ ಚಾಸಾ-7 ರವರಿಗೂ ಸಹ ಅವಾಚ್ಯ ದಿಂದ ಬೈದು ಬಲಗಾಲು ಎತ್ತಿ ಒದೆಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೆ ಚಾಸಾ-1 ರಾರಿಗೂ ಸಹ ದೂರವಾಣಿ ಕರೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ನೀವು ಹೆಂಗೆ ಅಂಕೋಲಾದಲ್ಲಿ ಬಾಳತಿಯಾ ನೋಡುಕೋತೀನಿ ಎಂದು ಬೆದರಿಕೆ ಹಾಕಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಕುರಿತು

ಚಾಸಾ–1 ರವರು ಪೊಲೀಸರಿಗೆ ದೂರನ್ನು ನೀಡಿದ್ದು, ನಿಪಿ–14 ರಂತೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಸದರಿ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯು ನಿಮಗೆ ಪರಿಚಯವಿರುವುದರಿಂದ ಅವರಿಗೆ ಸಹಾಯ ಮಾಡಲೆಂದು ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್.ಆರ್. ಎನ್ ಇವರಿಂದಃ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

C/c. ಜೆ.ಎಂ.ಎಫ್.ಸಿ., ಅಂಕೋಲಾ.